# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು – 560002

---

ಸಂ:ಮುಆ/ಪಿಆರ್/236/2023–24 ದಿನಾಂಕ: 01–02–2024

## ಮಾರ್ಪಾಡಿತ ಕಛೇರಿ ಆದೇಶ

**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹವಾಮಾನ ವೈಪರೀತ್ಯ ಘಟಕವನ್ನು ಸ್ಥಾಪಿಸುವ ಬಗ್ಗೆ**

**ಉಲ್ಲೇಖ:** 1) ನಡವಳಿ ಆದೇಶ ಸಂಖ್ಯೆ: ಮು.ಆ/ಪಿ.ಆರ್/216/2023–24, ದಿನಾಂಕ: 08–12–2023

2) ಈ ಕಛೇರಿ ಸಮಸಂಖ್ಯೆ ಆದೇಶದ ದಿನಾಂಕ: 30–12–2023

**_**_**_**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿನ ನಡವಳಿಯಲ್ಲಿ ಪರಿಸರ ಮತ್ತು ಹವಾಮಾನ ವೈಪರೀತ್ಯ ವಿಷಯದ ಕುರಿತು ಕಾರ್ಯ ನಿರ್ವಹಿಸುವ ಸಲುವಾಗಿ ವಿಶೇಷ ಆಯುಕ್ತರು (ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ) ಹುದ್ದೆಯನ್ನು ಮರು ಪದನಾಮೀಕರಿಸಿ ಆದೇಶಿಸಲಾಗಿರುತ್ತದೆ.

ಮುಂದುವರೆದಂತೆ, ಬೆಂಗಳೂರಿನಲ್ಲಿ ಹಸಿರು ಮನೆ ಅನಿಲ ಹೊರ ಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತು ಹವಾಮಾನದ ಅಪಾಯವನ್ನು ಕಡಿಮೆ ಮಾಡುವ ಉದ್ದೇಶದಿಂದ ವಿವಿಧ ಇಲಾಖೆಗಳೆಂದಿಗೆ ಸಮನ್ವಯ ಸಾಧಿಸಿ ಹವಾಮಾನ ಕ್ರಿಯಾ ಯೋಜನೆಯನ್ನು ಸಮಗ್ರವಾಗಿ ಜಾರಿಗೊಳಿಸಲು ಹವಾಮಾನ ವೈಪರೀತ್ಯ ನಿರ್ವಹಣೆ ಘಟಕವನ್ನು ಸ್ಥಾಪಿಸುವ ಅವಶ್ಯಕತೆ ಇರುವುದರಿಂದ ವಿಶೇಷ ಆಯುಕ್ತರು (ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ) ರವರ ನೇತೃತ್ವದಲ್ಲಿ ಹವಾಮಾನ ವೈಪರೀತ್ಯ ನಿರ್ವಹಣಾ ಘಟಕವನ್ನು ಉಲ್ಲೇಖ (2) ರಂತೆ ಸ್ಥಾಪಿಸಲಾಗಿರುತ್ತದೆ. ಸದರಿ ಕಛೇರಿ ಆದೇಶದಲ್ಲಿ ವಿಶೇಷ ಆಯುಕ್ತರು (ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ) ರವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಸದಸ್ಯರೊಳಗೊಂಡಂತೆ ಘಟಕವನ್ನು ರಚಿಸಲಾಗಿದ್ದು, ಸದರಿ ಘಟಕಕ್ಕೆ ಇನ್ನೂ ಕೆಲವು ಸಂಬಂಧಪಟ್ಟ ಇಲಾಖೆಗಳ ಪ್ರತಿನಿಧಿಗಳು ಅವಶ್ಯಕವೆಂದು ಪರಿಗಣಿಸಿ, ಸದರಿ ಇಲಾಖೆಗಳ ಪ್ರತಿನಿಧಿಗಳನ್ನು ಒಳಗೊಂಡಂತೆ ಮಾರ್ಪಡಿತ ಕಛೇರಿ ಆದೇಶವನ್ನು ಹೊರಡಿಸಲಾಗಿದೆ.

1) ವಿಶೇಷ ಆಯುಕ್ತರು (ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ) – ಅಧ್ಯಕ್ಷರು
2) ಪರಿಸರ, ಅರಣ್ಯ ಮತ್ತು ಜೀವಶಾಸ್ತ್ರ ಇಲಾಖೆ ವತಿಯಿಂದ ಒಬ್ಬ ಪ್ರತಿನಿಧಿ – ಸದಸ್ಯರು
3) ಬಿ.ಎಂ.ಟಿ.ಸಿ ಪ್ರತಿನಿಧಿ – ಸದಸ್ಯರು
4) ಬಿ.ಡಬ್ಲ್ಯೂ.ಎಸ್.ಎಸ್.ಬಿ ಪ್ರತಿನಿಧಿ – ಸದಸ್ಯರು
5) ಬಿ.ಎಂ.ಆರ್.ಸಿ.ಎಲ್ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
6) ಬೆಂಗಳೂರು ನಗರ ಸಂಚಾರಿ ಪೋಲೀಸ್ ಇಲಾಖೆಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
7) ಬೆಸ್ಕಾಂ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
8) ನಗರ ಭೂ ಸಾರಿಗೆ ನಿರ್ದೇಶನಾಲಯ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
9) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
10) ಸಾರಿಗೆ ಇಲಾಖೆ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
11) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಒಬ್ಬರು ಪ್ರತಿನಿಧಿ – ಸದಸ್ಯರು
12) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

13) ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಒಬ್ಬರು ಪ್ರತಿನಿಧಿ – ಸದಸ್ಯರು
14) ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
15) ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಯ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
16) ಕರ್ನಾಟಕ ರಾಜ್ಯ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕೇಂದ್ರದ ವತಿಯಿಂದ ಒಬ್ಬರು ಪ್ರತಿನಿಧಿ – ಸದಸ್ಯರು
17) ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಿಬಿಎಂಪಿ – ಸದಸ್ಯರು
18) ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಬಿ.ಡ್ಲ್ಯೂ.ಎಸ್.ಎಸ್.ಬಿ – ಸದಸ್ಯರು
19) ಮುಖ್ಯ ಪ್ರಧಾನ ವ್ಯವಸ್ಥಾಪಕರು (ಬಿ.ಎಸ್.ಡ್ಲ್ಯೂ.ಎಂ.ಎಲ್) – ಸದಸ್ಯರು
20) ಮುಖ್ಯ ಅಭಿಯಂತರರು (ಕೆರೆಗಳು), ಬಿ.ಬಿ.ಎಂ.ಪಿ– ಸದಸ್ಯ ಕಾರ್ಯದರ್ಶಿ

ಮೇಲ್ಕಂಡ ಇಲಾಖೆಯ ಮುಖ್ಯಸ್ಥರು ತಮ್ಮ ಇಲಾಖೆಯಿಂದ ಮುಖ್ಯ ಅಭಿಯಂತರರು/ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಸಹಾಯಕ ಪೋಲಿಸ್ ಆಯುಕ್ತರವರ ಹುದ್ದೆಗಿಂತ ಕಡಿಮೆ ಇಲ್ಲದಂತೆ ಒಬ್ಬ ಅಧಿಕಾರಿಯನ್ನು ಖಾಯಂ ಸದಸ್ಯರನ್ನಾಗಿ ಅವರು ವಯೋನಿವೃತ್ತಿ ಹೊಂದುವವರೆಗೂ ಅಥವಾ ಬೆಂಗಳೂರಿನಿಂದ ಹೊರಗಡೆ ವರ್ಗಾವಣೆ ಆಗುವವರೆಗೂ ನೇಮಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ವಿಶೇಷ ಆಯುಕ್ತರು (ಆಡಳಿತ) ರವರು ಸದರಿ ಘಟಕಕ್ಕೆ ಅಗತ್ಯ ನೆರವು/ ಸಹಾಯ ಮತ್ತು ಮಾಹಿತಿ ಒದಗಿಸುವ ಸಲುವಾಗಿ ಕೆಳಕಂಡ ವಿಭಾಗದ ಅಭಿಯಂತರರು/ ನೌಕರರನ್ನು ಪೂರ್ಣಕಾಲಿಕವಾಗಿ ಬೇರೆ ಕಡೆಯಿಂದ ಹುದ್ದೆ ಸಮೇತ ಸ್ಥಳಾಂತರಿಸಿ ನಿಯೋಜಿಸುವುದು.

1) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ) – 1
2) ಪ್ರಥಮ ದರ್ಜೆ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು – 1
3) ಒಬ್ಬ ಹೊರಗುತ್ತಿಗೆ ಗಣಕಯಂತ್ರ ನಿರ್ವಾಹಕರು – 1

ವಿಶೇಷ ಆಯುಕ್ತರು (ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ) ರವರು ತಮಗೆ ನೀಡಿರುವ ಪೂರ್ಣಕಾಲಿಕ ಅಧಿಕಾರಿ/ನೌಕರರ ಸೇವೆಯನ್ನು ಬಳಸಿಕೊಂಡು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಸಭೆಗಳನ್ನು ನಡೆಸಿ, ಹವಾಮಾನ ವೈಪರೀತ್ಯ ಹವಾಮಾನ ಕ್ರಿಯಾ ಯೋಜನೆಗಳನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮಕೈಗೊಳ್ಳುವುದು.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:**

1) ಮಾನ್ಯ ಆಡಳಿತಗಾರರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2) ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ರವರಿಗೆ ಸಲ್ಲಿಸಿದೆ
3) ಆಯುಕ್ತರು, ಪರಿಸರ, ಅರಣ್ಯ ಮತ್ತು ಜೀವ ಶಾಸ್ತ್ರ ಇಲಾಖೆ ರವರಿಗೆ ಸಲ್ಲಿಸಿದೆ.
4) ವಿಶೇಷ ಆಯುಕ್ತರು (ಆಡಳಿತ)/(ಕಂದಾಯ)/ಆಸ್ತಿಗಳು & ಮಾಹಿತಿ ತಂತ್ರಜ್ಞಾನ)/(ಆರೋಗ್ಯ)/(ಕಲ್ಯಾಣ)/(ಯೋಜನೆ)/ (ಘ.ತ್ಯಾ.ನಿ) ರವರಿಗೆ ಮುಂದಿನ ಕ್ರಮಕ್ಕಾಗಿ.
5) ಆಯುಕ್ತರು, ಬೆಂಗಳೂರು ನಗರ ಸಂಚಾರಿ ಪೋಲಿಸ್ ಇಲಾಖೆ ರವರಿಗೆ ಸಲ್ಲಿಸಿದೆ.
6) ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಆರ್.ಸಿ.ಎಲ್ ರವರಿಗೆ ಸಲ್ಲಿಸಿದೆ.
7) ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಟಿ.ಸಿ ರವರಿಗೆ ಸಲ್ಲಿಸಿದೆ,
8) ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ, ಬಿ.ಡ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ.
9) ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ ರವರಿಗೆ ಸಲ್ಲಿಸಿದೆ.
10) ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ರವರಿಗೆ ಸಲ್ಲಿಸಿದೆ.
11) ಆಯುಕ್ತರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರಿಗೆ ಸಲ್ಲಿಸಿದೆ.